


ಕಾಂಡ್ಲಕಾಡಿನಲ್ಲಿ ಕಾಲುದಾರಿ

ಟೊಂಕಾದಿಂದ ಅಪ್ಸರಕೊಂಡದವರೆಗಿನ ಮೂರು ಕಿಲೊಮೀಟರ್ ಉದ್ದದ ಕಾಸರಕೋಡು ಇಡೀ ನಾಡಿಗೇ ಹೆಮ್ಮೆಯ ಜಲಸಿರಿ, ಭೂಸಿರಿ, ಜೀವಿವೈವಿಧ್ಯದ ಐಸಿರಿ. ಈ ಕಡಲಪಟ್ಟಿಗೆ ಅಂತರರಾಷ್ಟ್ರೀಯ ಮಾನದಂಡದ ಪ್ರಕಾರ “ಬ್ಲೂ ಫ್ಲಾಗ್ ಬೀಚ್ ಮಾನ್ಯತೆ ಸಿಕ್ಕಿದೆ. ನಮ್ಮ ದೇಶದ ಸುಂದರ, ಸುರಕ್ಷಿತ, ಸಂರಕ್ಷಿತ ಹಾಗೂ ಸುಸ್ಥಿರ ಪರಿಸರವುಳ್ಳ 12 ಬೀಚ್‌ಗಳಲ್ಲಿ ಇದೂ ಒಂದು. ಇಲ್ಲೇ ಅರಣ್ಯ ಇಲಾಖೆಯ ಇಕೋ ಪಾರ್ಕ್ ಇದೆ; ಬೀಚ್‌ನ ಒಂದು ತುದಿಯಲ್ಲಿ ಅಪ್ಸರಕೊಂಡ ದಿಬ್ಬದಲ್ಲಿ ಸರ್ವಋತು ಜಲಪಾತ ಇದೆ. ಅದರಾಚೆ ಬೆಳ್ನೊರೆಯ ಮುಗಳಿ ಬೀಚ್ ಇದೆ. ಇಲ್ಲಿನ ಬಂಡೆಗಳ ಸಂದುಗೊಂದಿನಲ್ಲಿ ಪ್ರಾಕೃತಿಕ ಅಕ್ವೇರಿಯಂ ಇದೆ. ಉಬ್ಬರವಿಲ್ಲದಾಗ ಅಲ್ಲಿ ಹವಳದ ಪೊದೆಗಳು, ಸಮುದ್ರ ಸೌತೆ, ನಾನಾ ರೂಪಗಳ ಶಂಕುಗಳು, ಬ್ಲೂ ಡ್ಯಾಮ್ಸೆಲ್ಸ್, ಬಣ್ಣಬಣ್ಣದ ಸ್ಪಾಂಜ್‌ಗಳು, ಅಕ್ಟೊಪಸ್, ಸೀ ಎನಿಮೋನ್, ಬಣ್ಣದ ಮೀನು ಮುಂತಾದ ವೈವಿಧ್ಯಮಯ ಜೀವಲೋಕವನ್ನು ಬರಿಗಣ್ಣಿನಲ್ಲೇ ಕಾಣಬಹುದಾಗಿದೆ. ‘ಐಯುಸಿಎನ್’ (ವಿನಾಶದ ಅಂಚಿಗೆ ಬಂದಿರುವ ಜೀವಿಗಳ) ಕೆಂಪುಪಟ್ಟಿಯಲ್ಲಿರುವ 34 ವಿಶಿಷ್ಟ ಜಲಚರಗಳಿರುವ ಇಲ್ಲಿನ ಆರು ಕಿ.ಮೀ.ವರೆಗೆ ಸಂರಕ್ಷಣಾ ಮ್ಯೂಸಿಯಂ ಮಾಡುತ್ತೇವೆಂದು ಘೋಷಿಸಿ ಮುಖ್ಯಮಂತ್ರಿ (ರಾಜ್ಯ ವನ್ಯಜೀವಿ ಮಂಡಳಿಯ ಅಧ್ಯಕ್ಷರೂ ಆಗಿದ್ದ) ಬಿ.ಎಸ್. ಯಡಿಯೂರಪ್ಪನವರು ತಮ್ಮ 2020ರ ಮುಂಗಡಪತ್ರದಲ್ಲಿ ಒಂದು ಕೋಟಿ ರೂಪಾಯಿ ತೆಗೆದಿರಿಸಿದ್ದರು. ಮುಗಳಿಯ ಕಲ್ಲು ಕೊರಕಲುಗಳಲ್ಲಿ ಸಂಗ್ರಹವಾಗುವ ಉಪ್ಪನ್ನು ನೆಕ್ಕಲೆಂದು ಉಡ, ಮುಳ್ಳುಹಂದಿ, ಮೊಲ, ಕಾಡುಹಂದಿಗಳೂ ಬರುತ್ತಿರುತ್ತವೆ. ಅಪ್ಸರಕೊಂಡ ಗ್ರಾಮವನ್ನು ಸ್ಮಾರ್ಟ್ ವಿಲೇಜ್ ಆಗಿ ಪರಿವರ್ತಿಸುವ ನೀಲನಕ್ಷೆಯೂ ಸಿದ್ಧವಾಗಿದೆ ಅಲ್ಲಿಂದ ಕಣ್ಣಿಗೆ ಕಾಣುವಷ್ಟು ದೂರದಲ್ಲಿ ಪ್ರಸಿದ್ಧ




‘ನೇತ್ರಾಣಿ ದ್ವೀಪ’ ಇದೆ. ಅಲ್ಲಿ ಸ್ಕೂಬಾ ಡೈವಿಂಗ್ ಸೌಲಭ್ಯ ಇದೆ (ಪುನೀತ್ ರಾಜಕುಮಾರ್ ತಮ್ಮ ‘ಗಂಧದ ಗುಡಿ’ ಹೆಸರಿನ ಸಾಕ್ಷ್ಯಚಿತ್ರದಲ್ಲಿ ಡೈವ್ ಹೊಡೆದು ಬಣ್ಣದ ಮೀನುಗಳ ಚೆಲ್ಲಾಟವನ್ನು ನೋಡುವ ನೀರೊಳಗಿನ ದೃಶ್ಯವನ್ನು ಇಲ್ಲೇ ಚಿತ್ರೀಕರಣ ಮಾಡಲಾಗಿದೆ.) ಕಾಸರಕೋಡು ಬೀಚಿಗೆ ಹೊಂದಿಕೊಂಡಂತೆ ಶರಾವತಿ ಅಳಿವೆಯಲ್ಲಿ ಮನಮೋಹಕ ಕಾಂಡ್ಲಕಾಡು ಇದೆ. ಅದರ ಮಧ್ಯೆ ಅಂಕುಡೊಂಕಿನ ವೀಕ್ಷಣಾ ಪಥವನ್ನು ಅರಣ್ಯ ಇಲಾಖೆ ನಿರ್ಮಿಸಿದೆ. ನದಿಯಲ್ಲಿ ದೋಣಿಯಾನ ಸೌಲಭ್ಯ ಇದೆ. ಪ್ರಶಾಂತ ಅಳಿವೆಯಲ್ಲಿ ಡಾಲ್ಫಿನ್‌ಗಳ ನಲಿದಾಟವನ್ನೂ ನೋಡಬಹುದು.

ಕೇವಲ ನಾಲ್ಕಾರು ಕಿಲೊಮೀಟರ್ ಅಂತರದಲ್ಲಿ ಇಷ್ಟೊಂದು ವಿಧದ ನೈಸರ್ಗಿಕ ಸಂಪತ್ತು ಇರುವ ಈ ಕ್ಷೇತ್ರ ಸಹಜವಾಗಿ ಕಡಲತೀರದ ಸರ್ವೋತ್ತಮ ಪ್ರವಾಸೀತಾಣವೆಂದು ಪ್ರಸಿದ್ಧಿಗೆ ಬರಬೇಕಿತ್ತು. ಕರ್ನಾಟಕದ ಈ ಭಾಗದ ‘ಸಾಗರ ಜೀವಿವೈವಿಧ್ಯದ ಆಗರ’ ಎಂಬ ಹೆಗ್ಗಳಿಕೆ ಇದರದಾಗಬೇಕಿತ್ತು. ಅರಣ್ಯ ಇಲಾಖೆ ಮತ್ತು ಜೀವಿವೈವಿಧ್ಯ ಮಂಡಳಿ ಎರಡೂ ಅದನ್ನೇ ಹೇಳುತ್ತಿವೆ. ಪ್ರವಾಸೋದ್ಯಮಕ್ಕೂ ಅದು ವರದಾನವಾಗಬಹುದಿತ್ತು. ಆದರೂ ಅವೆಲ್ಲಕ್ಕೆ ಮಾರಕವಾಗಬಲ್ಲ ಬಂದರು ಅಭಿವೃದ್ಧಿಯ ತೂಗುಕತ್ತಿಯನ್ನು ಇಲ್ಲಿ ಇಳಿಬಿಡಲಾಗಿದೆ.

ಈ ಹಿನ್ನೆಲೆಯಲ್ಲಿ ನೋಡಿದಾಗ ಕಡಲಾಮೆಗಳ ರಕ್ಷಣೆಗೆ ಇಲ್ಲಿನ ಯುವಕರೆಲ್ಲ ಎದ್ದು ನಿಂತಿದ್ದರ ಮಜ್ಕೂರು ನಮಗೆ ಗೊತ್ತಾಗುತ್ತದೆ. ಟೊಂಕಾ ಊರಿನ ‘ಶ್ರೀ ಜೈನ ಜಟಕೇಶ್ವರ ಯುವಕಸಂಘ’ ಕಳೆದ ಮೂರು ವರ್ಷಗಳಿಂದ ಆಲಿವ್ ರಿಡ್ಲೆಗಳ ಕುರಿತು ವ್ಯವಸ್ಥಿತ ಮಾಹಿತಿಗಳನ್ನು ಸಂಗ್ರಹಿಸುತ್ತಿದೆ. ತಮ್ಮ ಕಡಲತೀರಕ್ಕೆ ಕುಂದಾಪುರದ ಕೋಡಿಗಿಂತ, ಕಾರವಾರದ ಮಾಜಾಳಿಗಿಂತ ಅದೆಷ್ಟು ಹೆಚ್ಚಿನ ಸಂಖ್ಯೆಯಲ್ಲಿ ಆಮೆಗಳು ಬರುತ್ತಿವೆ ಎನ್ನಲು ದಾಖಲೆಗಳನ್ನು ಜೋಡಿಸುತ್ತಿದೆ. ಅವುಗಳ ರಕ್ಷಣೆಗೆ ಮತ್ತು ಸುರಕ್ಷಿತ ಸಂತಾನವೃದ್ಧಿಗೆ ಮಹಿಳೆಯರೂ ಕೈಜೋಡಿಸಿದ್ದಾರೆ. ಆಮೆಗಳ ಹೆಜ್ಜೆಗುರುತಿನ ಲೆಕ್ಕ, ಗೂಡುಗಳ ಲೆಕ್ಕ, ಮರಿಗಳ ಪ್ರಸವದ ದಿನಾಂಕಗಳನ್ನು ಗುರುತಿಸುತ್ತಿದ್ದಾರೆ. ಗೂಡು ಉಬ್ಬುತ್ತಿರುವುದನ್ನು ಸೂಕ್ಷ್ಮವಾಗಿ ನೋಡಿ ಸಹಾಯಕ್ಕೆ ಸಂಘಟಿತರಾಗುತ್ತಾರೆ. ಮರಿಗಳು ಹೊರಬರುವ ಸಮಯದಲ್ಲಿ ಎಲ್ಲೆಲ್ಲೂ ಸಂಭ್ರಮ ಮೂಡುತ್ತಿದೆ. ‘ಆಮೆಗಳು ಸುರಕ್ಷಿತ ಇದ್ದರೆ ನಾವೂ ಸುರಕ್ಷಿತ’ ಎಂಬ ಭಾವನೆ ದಟ್ಟವಾಗಿ ಬೇರೂರಿದೆ.

‘ನೀನೆನಗಿದ್ದರೆ ನಾ ನಿನಗೆ’ ಎಂಬ ಪರಿಸರ ರಕ್ಷಣೆಯ ಪರಮೋಚ್ಚ ಸತ್ಯ ಇಲ್ಲಿನ ಕಡಲತಡಿಯಲ್ಲಿ ತಾನೇತಾನಾಗಿ ಒಡಮೂಡುತ್ತಿದೆ.

ಪ್ರತಿಕ್ರಿಯಿಸಿ: **feedback@sudha.co.in**